ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು
C.C. No.79/2024. PW 1.
ದಿನಾಂಕಃ**07.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲುಃ</u>- ಆರೋಪಿ ಪರ ಶ್ರೀ ಜಿ ಹೆಚ್ ಕೆ ವಕೀಲರಿಂದಃ-

ನಾನು ಮತ್ತು ಆರೋಪಿ ಕಳೆದ 4-5 ವರ್ಷಗಳಿಂದ ವಿಶ್ವಾಸದಿಂದ ಇದ್ದೆವು. ನಾನು ಕ್ಲಾಸ್ 1 ಕಂಟ್ರ್ಯಾಕ್ಟರ್ ಎಂದರೆ ಸರಿ. ನಾನು ಮತ್ತು ಆರೋಪಿ ಇಬ್ಬರು ಯಾವ ಕೆಲಸ / ಕಾಮಗಾರಿಯನ್ನು ಯಾವ ಊರಿನಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾನು ಅವರೊಂದಿಗೆ ಕೆಲಸ ಮಾಡಿರುವುದಿಲ್ಲ ಅವರು ನನಗೆ ಪರಿಚಯಸ್ತರು ಅಷ್ಟೇ. ನಾನು ನನ್ನ ದೂರಿನಲ್ಲಿ ನಾನು ಆರೋಪಿಗೆ ರಸ್ತೆ ಕಾಮಗಾರಿ ಮಿಷಿನ್‌ಗೆ ಮತ್ತು ಕೂಲಿ ಕಾರ್ಮಿಕರಿಗೆ ಕೊಡುವ ಉದ್ದೇಶಕ್ಕೆ ಹಣ ನೀಡಿದ್ದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆರೋಪಿಯು ನಾನು ಬೇರೆ ಕಡೆ ಕಾಮಗಾರಿ ಮಾಡುತ್ತಿದ್ದೇನೆ ಕಾರ್ಮಿಕರಿಗೆ ದುಡ್ಡು ನೀಡಿಲ್ಲ, ಹಣದ ಅಗತ್ಯತೆ ಇದೆ ಸಾಲವಾಗಿ ಹಣ ಕೊಡು ಎಂದು ಕೇಳಿದ್ದಕ್ಕೆ ನಾನು ಹಣ ನೀಡಿರುತ್ತೇನೆ.

ಚಿತ್ರದುರ್ಗದ ತಿಗ್ಗೇನಹಳ್ಳಿ ಗ್ರಾಮದಲ್ಲಿ ನಾನು ಟೆಂಡರ್ ಪಡೆದುಕೊಂಡು ಮಾಡಿದ ರಸ್ತೆಯ ಕಾಮಗಾರಿಗೆ ಆರೋಪಿಯು ಕೆಲಸದಾಳುಗಳನ್ನು ಕರೆದುಕೊಂಡು ಬಂದು ಮಷಿನ್ ಅನ್ನು ನೀಡಿ ಕೆಲಸ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ, ನಾನು ಆ ಗ್ರಾಮದಲ್ಲಿ ಯಾವುದೇ ಕೆಲಸ ಮಾಡಿಸಿಲ್ಲ.

ದಿಃ05.03.2023 ರಂದು ನನ್ನ ಮನೆಯಲ್ಲಿ ನಾನು ಆರೋಪಿಗೆ ಹಣ ನೀಡಿರುತ್ತೇನೆ. ಹಣ ಪಡೆದ ದಿನವೇ ಆರೋಪಿ ನನಗೆ 2 ಚೆಕ್ ನೀಡಿರುತ್ತಾರೆ. ರೂ.15 ಲಕ್ಷ ಹವನ್ನು ನಾನು ನಗಧಾಗಿ ನೀಡಿರುತ್ತೇನೆ. ಸದರಿ ಹಣವನ್ನು ರೂ.500 ರ ಮುಖ ಬೆಲೆಯ ನೋಟುಗಳಲ್ಲಿ ನೀಡಿರುತ್ತೇನೆ. ಒಟ್ಟು 30 ಬಂಡಲ್ ನೀಡಿರುತ್ತೇನೆ.

ನಾನು ನನ್ನ ದೂರಿನಲ್ಲಿ ಆರೋಪಿ ಮತ್ತು ನಾನು ಸೇರಿ ಸಣ್ಣ-ಪುಟ್ಟ ಕಂಟ್ರ್ಯಾಕ್ಟ ಪೀಸ್ ವರ್ಕ್ ಗಳನ್ನು ಮಾಡಿಕೊಂಡಿದ್ದೆವು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವ ನಿಪಿ 5 ಬ್ಯಾಂಕಿ ಚಲನ್ ನ ನಲ್ಲಿನ ಬರವಣಿಗೆ ಯಾರದ್ದು ಎಂದು ನನಗೆ ಗೊತ್ತಾಗುವುದಿಲ್ಲ, ಆದರೆ ನಾನು ಬರೆದಿರುವುದಿಲ್ಲ. ನಿಪಿ 1, 2 ನ್ನು ಆರೋಪಿ ಬರೆದುಕೊಟ್ಟಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.